ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು):-

(ಅ) ಇದುವರೆವಿಗೂ ಬಂದಿಲ್ಲ.

(ಆ) ಉದ್ಭವಿಸುವುದಿಲ್ಲ.

ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ):-

1053(521) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ವಿಷಯಗಳನ್ನು ತಿಳಿಸುವರೆ:-

(ಅ) ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಗೆ ಕಳೆದ ವರ್ಷ ಹಾಗೂ ಈ ವರ್ಷದ ಆಯವ್ಯಯದಲ್ಲಿ ಒದಗಿಸಲಾಗಿರುವ ಹಣವೆಷ್ಟು;

(ಆ) ಈ ಪೈಕಿ ಪ್ರತಿ ಜಿಲ್ಲೆಗೆ ಹಂಚಿಕೆ ಮಾಡಲಾಗಿರುವ ಮತ್ತು ಬಿಡುಗಡೆ ಮಾಡಿರುವ ಮತ್ತು ವೆಚ್ಚವಾಗಿರುವ ಹಣವೆಷ್ಟು;

(ಇ) ಇದೇ ಅವಧಿಯಲ್ಲಿ ಕೇಂದ್ರ ಸರ್ಕಾರದಿಂದ ಬಂದಿರುವ ಹಣದ ಮೊತ್ತವೆಷ್ಟು; ಇದಕ್ಕೆ ರಾಜ್ಯ ಸರ್ಕಾರವು ತನ್ನ ಪಾಲಿನ ಎಷ್ಟು ಮೊತ್ತದ ಮ್ಯಾಚಿಂಗ್ ಅನುದಾನ ಬಿಡುಗಡೆ ಮಾಡಲಾಗಿದೆ;

(ಈ) ಮೇಲ್ಕಂಡ ಅವಧಿಯಲ್ಲಿ ಈ ಮೊತ್ತದಿಂದ ಕೈಗೊಂಡಿರುವ ಕಾಮಗಾರಿಗಳ ವಿವರಗಳೇನು?

ಶ್ರೀ ಕೆ.ಎಸ್.ಈಶ್ವರಪ್ಪ (ಜಲಸಂಪನ್ಮೂಲ ಸಚಿವರು):-

(ಅ) ಜಲಸಂಪನ್ಮೂಲ ಇಲಾಖೆ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ 2006-07 ಮತ್ತು 2007-08ನೇ ಸಾಲಿನ ಆಯ್ಯವ್ಯಯದಲ್ಲಿ ಒದಗಿಸಲಾದ ಅನುದಾನದ ವಿವರಗಳು ಈ ಕೆಳಗಿನಂತಿವೆ.

(ರೂ.ಕೋಟಿಗಳಲ್ಲಿ)

ವರ್ಷ	ಆಯ್ಯವ್ಯಯದ ಅನುದಾನ (ಐ.ಇ.ಬಿ.ಆರ್. ಹೊರತುಪಡಿಸಿ)
2006-07	3237.45
2007-08	3229.95

(ಆ) ಜಲ ಸಂಪನ್ಮೂಲ ಇಲಾಖೆಗೆ ಆಯವ್ಯಯದಲ್ಲಿ ಜಿಲ್ಲಾವಾರು ಹಂಚಿಕೆ ಮಾಡಲಾಗುವುದಿಲ್ಲ. ಬದಲಾಗಿ ಯೋಜನಾವಾರು ಅನುದಾನ ಹಂಚಿಕೆ ಮಾಡಲಾಗುತ್ತಿದೆ. 2006–07ನೇ ಸಾಲಿನಲ್ಲಿ ನಿಗಮವಾರು/ವಲಯವಾರು ವೆಚ್ಚ ಮಾಡಲಾಗಿರುವ ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ.

(ಇ) ಕೇಂದ್ರದ ನೆರವು ಎಐ.ಬಿ.ಪಿ. ಅಡಿ 5 ಯೋಜನೆಗಳಿಗೆ ಮಾತ್ರ ಬರುತ್ತಿರುತ್ತದೆ. ಇನ್ನುಳಿದ ಯೋಜನೆಗಳಿಗೆ ರಾಜ್ಯ ಸರ್ಕಾರವು ಒದಗಿಸುವ ಅನುದಾನದಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. 2006–07 ಹಾಗೂ 2007–08ನೇ ಸಾಲಿನಲ್ಲಿ ಎ.ಐ.ಬಿ.ಪಿ. ಅಡಿಯಲ್ಲಿ ಕೇಂದ್ರದಿಂದ ಬಿಡುಗಡೆಯಾದ ಹಣ ಮತ್ತು ರಾಜ್ಯದ ಪಾಲಿನ ಮ್ಯಾಚಿಂಗ್ ಅನುದಾನ ಸೇರಿದಂತೆ ಮಾಡಲಾದ ವೆಚ್ಚದ ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

(ಈ) ಪ್ರಗತಿಯಲ್ಲಿರುವ ಈ ಐದು ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಿ, ನೀರಾವರಿ ಸೌಲಭ್ಯ ಒದಗಿಸಲು ಮುಖ್ಯ ನಾಲೆ, ವಿತರಣಾ ನಾಲೆ ಮತ್ತು ಅಡ್ಡಮೋರಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ.

ಅನುಬಂಧ-1

ಜಲ ಸಂಪನ್ಮೂಲ ಇಲಾಖೆಯಲ್ಲಿ (ಭಾರೀ ಮತ್ತು ಮಧ್ಯಮ ನೀರಾವರಿ) 2006-09 ರಿಂದ 2007-08ನೇ ಸಾಲಿನವರೆಗೆ ನಿಗಮವಾರು/ವಲಯವಾರು ಅನುದಾನ ಹಾಗೂ ವೆಚ್ಚದ ವಿವರಗಳು

(ರೂ.ಕೋಟಿಗಳಲ್ಲಿ)

ಕ್ರ. ಸಂ.	ನಿಗಮ /ವಲಯ	2006-07		2007-08	
		ಅನುದಾನ	ವೆಚ್ಚ	ಅನುದಾನ	ವೆಚ್ಚ
1	ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ	1538.97	2303.6	858.27	352.52
2	ಕರ್ನಾಟಕ ನೀರಾವರಿ ನಿಗಮ ನಿಯಮಿತ	1462.34	1226.8	1632.77	100.54
3	ಕಾವೇರಿ ನೀರಾವರಿ ನಿಗಮ ನಿಯಮಿತ	477.00	538.26	706.96	95.47
4	ನೀರಾವರಿ ಕೇಂದ್ರ ವಲಯ, ಮುನಿರಾಬಾದ್	102.55	90.88	54.27	0.22
5	ನೀರಾವರಿ ಯೋಜನಾ ವಲಯ, ಗುಲ್ಬರ್ಗಾ	45.40	21.64	11.73	1.84
6	ತುಂಗಾ ಮೇಲ್ದಂಡೆ ಯೋಜನಾ ವಲಯ, ಶಿವಮೊಗ್ಗ	104.53	92.08	176.23	0.50

ಅನುಬಂಧ-2

ಎ.ಐ.ಬಿ.ಪಿ. ಆಧಾರದಲ್ಲಿ ಕೇಂದ್ರದಿಂದ ಇಡುಗಡೆಯಾದ ಹಣ ಮತ್ತು ರಾಜ್ಯದ ಪಾಲಿನ ಮ್ಯಾಚಿಂಗ್ ಅನುದಾನ ಸೇರಿದಂತೆ ಮಾಡಲಾದ ವೆಚ್ಚದ ವಿವರಗಳು.

(ರೂ.ಕೋಟಿಗಳಲ್ಲಿ)

ಕ್ರ. ಸಂ.	ಯೋಜನೆ	2006-07			2007-08		
		ಕೇಂದ್ರ ಸಹಾಯ ಧನ	ರಾಜ್ಯದ ಪಾಲು	ವೆಚ್ಚ	ಕೇಂದ್ರ ಸಹಾಯ ಧನ	ರಾಜ್ಯದ ಪಾಲು	ವೆಚ್ಚ
1	ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1	71.64 *	46.19	46.19	-	355.52	355.52
2	ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-2	172.53	62.05	234.58	-		
3	ಮಲಪ್ರಭಾ	13.50	17.78	31.28	-	9.47	9.47
4	ಘಟಪ್ರಭಾ	30.81	46.48	77.29	-	14.59	14.59
5	ಗಂಡೋರಿನಾಲಾ	45.53 *	34.96	34.96	-	1.89	1.89

* ಕೇಂದ್ರ ಸಹಾಯಧನವು ಮಾರ್ಚ್ ಅಂತ್ಯಕ್ಕೆ ಇಡುಗಡೆಯಾದ ಕಾರಣ ಅನುದಾನವನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ.